ಅಧ್ಯಕ್ಷರು : ನಿಮ್ಮ ಕ್ಷೇತ್ರದಲ್ಲಿ ಅದನ್ನು ಮಾಡಿಸೋಣ. ನಿಮಗೆ ಸ್ಪೆಶಲ್ ಕನ್ಸಿಡರೇಶನ್ ಇದೆ. ನಿಮ್ಮ ಸಚಿವರಿಗೆ ಹೇಳಿ ಮಾಡಿಸೋಣ. ನಿಮ್ಮ ಮಂತ್ರಿಯವರು ಮಾಡಿಕೊಡುತ್ತಾರೆ, ಅವರು ಒಪ್ಪಿಕೊಂಡಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅವರು ಉತ್ತರ ಕೊಡುವಾಗ ಆರ್ಥಿಕ ಮುಗ್ಗಟ್ಟಿನಿಂದಾಗಿ 1997ರ ಆಯವ್ಯಯದಲ್ಲಿ ಸೇರಿಸಲಾಗುವುದಿಲ್ಲ ಎಂದು ಹೇಳಿದ್ದಾರೆ. ದಯಮಾಡಿ 1997-98ರಲ್ಲಿ ಸೇರಿಸಿ ಆ ಕೆಲಸವನ್ನು ಮಾಡಬೇಕು.

ಅಧ್ಯಕ್ಷರು : ಅವರು ಅದನ್ನೇ ಹೇಳಿದ್ದುದು. ಒಂದು ಸಬ್‌ಸ್ಟೇಶನ್ ಮಾಡಿಕೊಡುತ್ತಾರೆ. ರೇವು ನಾಯಕರ ಕೆಲಸವನ್ನು ನಾನು ಮಾಡಿಸಿಕೊಡುತ್ತೇನೆ. ಅದನ್ನು ನನಗೆ ಬಿಟ್ಟುಬಿಡಿ. ಒಂದು ಸ್ಟೇಶನ್‌ನ್ನು ಮಾಡಿಸಿಕೊಡುತ್ತಾರೆ.

ಅಪೆಕ್ಸ್ ಬ್ಯಾಂಕಿನಲ್ಲಿ ನೀರಿನ ಬಿಲ್‌ಗಳ ಸಂದಾಯ

326 - ಶ್ರೀ ರಾಮಲಿಂಗರೆಡ್ಡಿ, (ಜಯನಗರ) : ಮಾನ್ಯ ಬೆಂಗಳೂರು ಅಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಂಗಳೂರು ನಗರದಲ್ಲಿ ನೀರಿನ ಬಿಲ್ಲುಗಳ ಹಣವನ್ನು ರಾಜ್ಯ ಅಪೆಕ್ಸ್ ಬ್ಯಾಂಕಿನ ಶಾಖೆಗಳಲ್ಲಿ ಪಾವತಿ ಮಾಡುವ ಸೌಲಭ್ಯ ಕಲ್ಪಿಸಲಾಗಿದೆಯೇ ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರವು ಕ್ರಮ ಕೈಗೊಳ್ಳಲು ಆಲೋಚಿಸುತ್ತದೆಯೇ ?

ಶ್ರೀ ಅನಂತನಾಗ್ (ಬೆಂಗಳೂರು ಅಭಿವೃದ್ಧಿ ರಾಜ್ಯ ಸಚಿವರು) :

ಅ) ಇಲ್ಲ.

ಆ) ಇಲ್ಲ.

ಶ್ರೀ ರಾಮಲಿಂಗಾ ರೆಡ್ಡಿ : ಮಾನ್ಯ ಅಧ್ಯಕ್ಷರೇ, ಅಪೆಕ್ಸ್ ಬ್ಯಾಂಕ್‌ನಲ್ಲಿ ನೀರಿನ ಬಿಲ್ಲು ಕಟ್ಟುವ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು - ಆ ಪ್ರಸ್ತಾವನೆಯು ಇದೆಯೇ ಎಂದು ಕೇಳಿದ್ದಕ್ಕೆ ಇಲ್ಲಎಂದು ಉತ್ತರದಲ್ಲಿ ಹೇಳಿದ್ದಾರೆ. ಬೆಂಗಳೂರು ನಗರದಲ್ಲಿ ಇರತಕ್ಕಂಥ ಕೌಂಟರ್ಸ್ ಬಹಳ ಕಡಿಮೆ ಇದೆ. ವಿಶೇಷತಃ ಜಯನಗರ ಶಾಪಿಂಗ್ ಕಾಂಪ್ಲೆಕ್ಸ್‌ನಲ್ಲಂತೂ 2-3 ಗಂಟೆಗಳ ಕಾಲ ನಿಂತುಕೊಳ್ಳಬೇಕಾಗುತ್ತದೆ. ಜಯನಗರ ಕ್ಷೇತ್ರದ 3-4 ಕಡೆಗಳಲ್ಲಿ ಮಾತ್ರ ಇವರ ಕೌಂಟರ್ ಇದೆ. 4-5 ಕಿ.ಮೀ ದೂರದಿಂದ ಬಂದು ಬಿಲ್ಲು ಕಟ್ಟ ಬೇಕಾಗುತ್ತದೆ. ಆದ್ದರಿಂದ ಬೆಂಗಳೂರು ನಗರಕ್ಕೆ ಕೌಂಟರ್‌ಗಳನ್ನು ಜಾಸ್ತಿ ಮಾಡಿ ಅಥವಾ ಇರುವ ಕೌಂಟರ್‌ಗಳಲ್ಲಿ ಸಿಬ್ಬಂದಿ ಜಾಸ್ತಿ ಮಾಡಿ. ಇಲ್ಲವಾದರೆ ಅಪೆಕ್ಸ್ ಬ್ಯಾಂಕ್‌ನವರಿಗೆ ಕೊಟ್ಟರೆ ಯಾವ ತೊಂದರೆಯೂ ಆಗಲಾರದು ಎಂದು ನನ್ನ ಅಭಿಪ್ರಾಯ.

ಅಧ್ಯಕ್ಷರು : ನೀವು ಜಾಸ್ತಿ ಮಾಡಲು ಕೇಳಿದ್ದು ಏನು ? ಕೌಂಟರ್ ಅಥವಾ ಕೌಂಟರ್‌ಫೀಟ್ ?

ಶ್ರೀ ಅನಂತ್‌ನಾಗ್ : ಸನ್ಮಾನ್ಯ ಅಧ್ಯಕ್ಷರೆ, ಈ ಸಮಸ್ಯೆ ಆಗಲೇ ಸರ್ಕಾರದ ಗಮನಕ್ಕೆ ಬಂದಿದೆ. ಕಳೆದ ವಾರ ಇನ್ನೋರ್ವ ಸದಸ್ಯರಾದ ಶ್ರೀ ಸುರೇಶ್‌ಕುಮಾರವರು ಈ ಕುರಿತು ಕೌಂಟರ್‌ಗಳನ್ನು ತೆರೆಯಬೇಕೆಂದು ಹೇಳಿದ್ದರು. ಆದರೆ ನಾವು ಜಲಮಂಡಳಿಯಲ್ಲಿ ಇದರ ಬಗ್ಗೆ ತೀವ್ರವಾಗಿ ಪರಿಶೀಲನೆ ಮಾಡುತ್ತಿದ್ದೇವೆ. ಖಂಡಿತವಾಗಿ ಆದಷ್ಟು ಬೇಗ ಹೆಚ್ಚಿನ ಜಲಮಂಡಳಿ ಕೇಂದ್ರಗಳನ್ನು ಓಪನ್ ಮಾಡುತ್ತೇವೆ. ಹಿಂದೆ ಬ್ಯಾಂಕ್‌ಗಳ ಕೌಂಟರ್‌ಗಳಲ್ಲಿ ಹಣದ ಬಿಲ್ಲುಗಳನ್ನು ಪೇ ಮಾಡುವಂತಹ ವ್ಯವಸ್ಥೆ ಮಾಡಲಾಗಿತ್ತು. ಆದರೆ ಎಲ್ಲಾ ಬ್ಯಾಂಕ್‌ಗಳಿಂದ ಪೂರ್ತಿ ಸಹಕಾರ ಆಗಲಿಲ್ಲ ಆ ಹಿಂದೆ ವ್ಯವಸ್ಥೆ ಇದ್ದಾಗ ಆ ಕಲೆಕ್ಷನ್ ಬ್ಯಾಂಕಿನಿಂದ ರೆಮಿಟ್ ಮಾಡಿದ್ದಾರೆ. ಆದರೆ ಸುಮಾರು 80 ಲಕ್ಷ ರೂಪಾಯಿ ಅಪರಾ ತಪರಾ ಆಗಿರುವುದು ಕಂಡು ಬಂದಿದೆ. ಈಗ ಜಲಮಂಡಳಿ ಕೇಂದ್ರಗಳನ್ನು ನಾವು ಹೆಚ್ಚಿಸುತ್ತೇವೆ ಎನ್ನುವ ಭರವಸೆಯನ್ನು ಮಾನ್ಯ ಸದಸ್ಯರಿಗೆ ತಮ್ಮ ಮೂಲಕ ತಿಳಿಸುತ್ತೇನೆ.

ಬೆಳ್ತಂಗಡಿಯ ನೆರಿ ಯೋಜನೆ

327 - ಶ್ರೀ ಕುಂಭೆ ಸುಂದರರಾವ್ (ಸುರತ್ಕಲ್) : ಮಾನ್ಯ ಭಾರಿ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನ ನೆರಿ ಯೋಜನೆಯ ಪ್ರಸ್ತಾಪವು ಸರ್ಕಾರದವರ ಮುಂದೆ ಎಂದು ಬಂದಿತ್ತು?

ಆ) ಆ ಬಗ್ಗೆ ಸರ್ಕಾರವು ಕೈಗೊಂಡ ಪೂರ್ವಭಾವಿ ಸಿದ್ದತೆಗಳೇನು?

ಇ) ನೆರಿ ಯೋಜನೆ ಕಾರ್ಯಗತವಾದರೆ ಒದಗುವ ಪ್ರಯೋಜನ ಏನು ? (ವಿವರ ನೀಡುವುದು)

ಈ) ವಿಶ್ವಬ್ಯಾಂಕಿನಿಂದ ಈ ಯೋಜನೆಗೆ ನೆರವು ಪಡೆಯಲಾಗುವುದೇ? (ಪ್ರಗತಿಯ ವಿವರ ನೀಡುವುದು)

ಶ್ರೀ ಕೆ.ಎನ್. ನಾಗೇಗೌಡ (ಭಾರಿ ನೀರಾವರಿ ಸಚಿವರು) :

ಅ) ಸದರಿ ಪ್ರಸ್ತಾವೆಯು 1981 ರಲ್ಲಿ ಸರ್ಕಾರದ ಗಮನಕ್ಕೆ ಬಂದಿದೆ.

ಆ) ಈ ಯೋಜನೆಯು ನೀರಾವರಿ, ಕುಡಿಯುವ ನೀರು ವಿದ್ಯುಚ್ಛಕ್ತಿ ಉತ್ಪಾದನೆ, ಮತ್ತು ಪ್ರವಾಹ ನಿಯಂತ್ರಣಗಳನ್ನೊಳಗೊಂಡ ಸಮಗ್ರ ಯೋಜನೆ ಆಗಿರುತ್ತದೆ. ಹಾಗೂ ವಿದ್ಯುಚ್ಛಕ್ತಿ ಉತ್ಪಾದನೆ ಯೋಜನೆಯು ಒಂದು ಪ್ರಮುಖ ಅಂಗವಾಗಿದ್ದು, ಕರ್ನಾಟಕ ವಿದ್ಯುತ್ ನಿಗಮವರು ರೂಪರೇಷೆಗಳನ್ನು ಅಂತಿಮಗೊಳಿಸುತ್ತಿರುತ್ತಾರೆ. ಯೋಜನೆಯಿಂದ ನೀರಾವರಿ ಅಡಿ ಆಗುವ ಪ್ರಯೋಜನವನ್ನು ನಂತರ ಅಂತಿಮಗೊಳಿಸಲಾಗುವುದು.

ಶ್ರೀ ಕುಂಭೆ ಸುಂದರರಾವ್ : ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆ ಬೆಳ್ತಂಗಡಿ ಎಂಬ ತಾಲ್ಲೂಕಿನ ನೆರೆ ಎಂಬಲ್ಲಿ ಅಣೆಕಟ್ಟು ಕಟ್ಟಿದ್ದಲ್ಲಿ ವಿದ್ಯುತ್ ಉತ್ಪಾದನೆ ಆಗುತ್ತಿದೆ. ನೀರಾವರಿಗೂ ಒದಗಿಸಬಹುದೇ